**Misc No. 55/2022**

**ಪಿ.ಡಬ್ಲೂ -1**

**ದಿಃ 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಾದ ಶ್ರೀ VKP ರವರಿಂದಃ-**

1. ನಾನು ಹಾಗೂ ಎದುರುದಾರರು ಒಂದೇ ಊರಿನಲ್ಲಿ ವಾಸವಿರುತ್ತೇವೆ ಎಂದರೆ ಸರಿ. ನನ್ನ ತಂದೆ ಹಾಗೂ ಎದುರುದಾರರ ತಂದೆಯು ಅಣ್ಣತಮ್ಮಂದಿರು ಎಂದರೆ ಸರಿ. ಅಸಲು ದಾವಾ ಸಂಖ್ಯೆ 905/2019 ನ್ನು ಹೂಡುವ ಮೊದಲು ಎದುರುದಾರರಾದ ಮಾರುತಿ ಹಾಗೂ ಲಕ್ಷ್ಮಣ ನಮ್ಮ ವಿರುದ್ದ ಆಸ್ತಿಯಲ್ಲಿ ವಿಭಾಗ ಕೋರಿ ದಾವೆ ಹೂಡಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 296/2008 ರಲ್ಲಿ ದಿಃ 18-03-2009 ರಂದು ಈ ನ್ಯಾಯಾಲಯವು ನನಗೆ ಹಾಗೂ ಎದುರುದಾರರಿಗೆ ತಲಾ ಅರ್ಧ ಹಿಸ್ಸೆ ಇರುತ್ತದೆ ಎಂದು ತೀರ್ಪು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ 2017 ನೇ ಇಸವಿಯಲ್ಲಿ Misc No. 39/2017 ರಂತೆ ನಾನು ಸದರಿ ತೀರ್ಪನ್ನು ತಳ್ಳಿಹಾಕುವ ಸಲುವಾಗಿ ನಾನು ಹೂಡಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾಗೊಂಡಿರುತ್ತದೆ ಎಂದರೆ ಸರಿ. ನಂತರ ನಾನು ಆರ್ ಎ 446/2017 ರಂತೆ ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ. ದಾವಾ ಸ್ವತ್ತಿನ ಉತಾರದಲ್ಲಿ ನನ್ನ ಹಾಗೂ ಎದುರುದಾರರ ಹೆಸರುಗಳು ನಮೂದು ಇರುತ್ತವೆ ಎಂದರೆ ಸರಿಯಲ್ಲ. ನಮ್ಮ ನಡುವೆ ವಾಟ್ನಿ ಆಗಿದ್ದರೂ ಸಹ ನಾನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಅಸಲು ದಾವಾ ಸಂಖ್ಯೆ 905/2019 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ವಾಟ್ನಿಯಾದ ನಂತರವೂ 11 ವರ್ಷಗಳ ನಂತರ ನಾನು ಅಸಲು ದಾವಾ ಸಂಖ್ಯೆ

905/2019 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸಾಕ್ಷಿ ಸದರಿ ದಾವಾ ಸ್ವತ್ತಿನಲ್ಲಿ ವಾಟ್ನಿ ಆಗಿರುವುದಿಲ್ಲ, ದಾವಾ ಸ್ವತ್ತು ತನಗೆ ಸೇರಿದ್ದು ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 905/2019 ರಲ್ಲಿ ನಾನು ದಾವಾ ಸ್ವತ್ತಿನ ಕುರಿತು ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಎದುರುದಾರರು ಎಮ್ ಎ 75/2019 ರಂತೆ 1ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಲಯ, ಬೆಳಗಾವಿ ಇಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ.

2. ನಂತರ ನನ್ನ ಸಹೋದರಿಯರು ಎದುರುದಾರರ ವಿರುದ್ಧ ದಾವಾ ಸ್ವತ್ತಿನ ಕುರಿತು ಒಂದು ವಾಟ್ನಿ ದಾವೆ ಹೂಡಿರುತ್ತಾರೆ ಹಾಗೂ ಸದರಿ ದಾವೆಯು ಅಸಲು ದಾವಾ ಸಂಖ್ಯೆ 141/2022 ರಂತೆ ಇರುತ್ತದೆ ಎಂದರೆ ಸರಿ. ಆದರೂ ಸಹ ಎದುರುದಾರರ ಪಾಲಿನ ಹಿಸ್ಸೆಯನ್ನು ಕಬಳಿಸುವ ಉದ್ದೇಶದಿಂದ ನಾನು ಅಸಲು ದಾವಾ ಸಂಖ್ಯೆ 905/2019 ರಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಸಲು ದಾವಾ ಸಂಖ್ಯೆ 905/2019 ನ್ನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಅದನ್ನು ನಡೆಸದೆ ತಳ್ಳಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯ ಸುಮಾರು ದಿನಾಂಕಗಳನ್ನು ನೀಡಿದರೂ ಸಹ ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಆದೇಶ ಪುಟದ ಪ್ರಕಾರ ನಾನು ನ್ಯಾಯಾಲಯ ನೀಡಿದ ದಿನಾಂಕಗಳನ್ನು ಹಾಜರಾಗಿರಲಿಲ್ಲ ಎಂದರೆ ಸಾಕ್ಷಿ ತನ್ನ ಆರೋಗ್ಯ ಸರಿಯಿಲ್ಲದ ಕಾರಣ ಹಾಗೂ ತನಗೆ typhoid ಆದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ನನ್ನ ಆರೋಗ್ಯ ಸರಿಯಿರಲಿಲ್ಲ ಎಂದು ತೋರಿಸಲು ನಾನು ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

3. ದಿಃ 02-03-2020 ರಿಂದ ದಿ 08-12-2020 ರವರೆಗೆ ನಾನು ಅಸಲು ದಾವಾ ಸಂಖ್ಯೆ 905/2019 ರಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ವಿನಾಕಾರಣ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಮಧ್ಯಂತರ ಅರ್ಜಿಗಳನ್ನು ಸಲ್ಲಿಸುತ್ತಾ ಇದ್ದೆ ಎಂದರೆ ಸರಿಯಲ್ಲ. ನಾನು ಸದರಿ ದಾವೆಯಲ್ಲಿ ವಕೀಲರನ್ನೂ ಸಹ 2-3 ಸಲ ಬದಲಾಯಿಸಿರುತ್ತೇನೆ ಎಂದರೆ ಸರಿ. ಸದರಿ ಎಲ್ಲಾ ನಡವಳಿಕೆಗಳು ಸಂಶಯಾತೀತವಾಗಿದ್ದು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಆ ರೀತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಕುರಿತು ನನ್ನ ಹಾಗೂ ಎದುರುದಾರರ ನಡುವೆ ಕ್ರಿಮಿನಲ್ ಮೊಕದ್ದಮೆ ಬೆಳಗಾವಿ ಗ್ರಾಮೀಣ ಪೋಲಿಸ ಠಾಣೆಯಲ್ಲಿ ಆಗಿರುತ್ತದೆ ಎಂದರೆ ಸರಿ. ನಾನು ದಾವಾ ಸ್ವತ್ತಿನ ಕುರಿತು ನಿರ್ಭಂದಕಾಜ್ಞೆ ಆದೇಶ ಮಾತ್ರ ಪಡೆಯಲು ದಾವೆ ಹೂಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರಿಯರು ಹೂಡಿದ ಅಸಲು ದಾವಾ ಸಂಖ್ಯೆ 141/2022 ರಲ್ಲಿಯೂ ಸಹ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಇರುತ್ತದೆ ಎಂದರೆ ಸರಿ.

4. ನಾನು ಪ್ರಸ್ತುತ ಅರ್ಜಿಯಲ್ಲಿ ನನ್ನ ಅನಾರೋಗ್ಯದ ಕುರಿತು ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾವೆ ವಜಾ ಆದರೂ ಸಹ ನನಗೆ ಯಾವುದೇ ಹಾನಿ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**